ಚಾಸಾಃ 1 ಪ್ರಾಸಾಃ 1

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

**ಸಿಸಿ ಸಂಖ್ಯೆ: 588/2023**

ಹೆಸರು : ಸೌಮ್ಯ

ಗಂಡನ ಹೆಸರು : ವಿಕ್ರಮ್ ಭಂಡಾರಿ

ಪ್ರಾಯ : 26 ವರ್ಷ

ಉದ್ಯೋಗ :

ವಾಸ : ಉಜಿರೆ, ಬೆಳ್ತಂಗಡಿ ತಾಲೂಕು

ದಿನಾಂಕ **24.06.2024** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ದಿಃ 20.1.2022 ರಂದು ನಮ್ಮ ಮದುವೆ ಮಂಗಳೂರು ಸುರತ್ಕಲ್‌ನ ಸ್ಕ್ರೆಡ್‌ಹಾರ್ಟ್ ಚರ್ಚ್ ಸಭಾಂಗಣದಲ್ಲಿ 1 ನೇ ಆರೋಪಿಯ ಜೊತೆ ನನ್ನ ವಿವಾಹವಾಗಿರುತ್ತದೆ. ದಿಃ 23.1.2022 ರಂದು ನಾನು 1 ನೇ ಆರೋಪಿಯ ಮನೆಗೆ ಹೋಗಿರುತ್ತೇನೆ. ಅಲ್ಲಿ 1 ನೇ ಆರೋಪಿಯ ಜೊತೆ ನನ್ನ ಅತ್ತೆ ಮತ್ತು ಮಾವ ಕೂಡ ಇದ್ದರು. ದಿಃ 30.1.2022 ರಂದು ಸಮಯ 11 ಗಂಟೆಗೆ ಅವಾಚ್ಯ ಶಬ್ದಗಳಿಂದ 2 ನೇ ಆರೋಪಿ ನನಗೆ ಬೈಯಲು ಪ್ರಾರಂಭಿಸಿದ್ದರು. ನಾನು ಮಾಡುವ ಕೆಲಸದಲ್ಲಿ ತಪ್ಪನ್ನು ಹುಡುಕುತ್ತಿದ್ದರು. ಪದೇ ಪದೇ ನಿನ್ನ ತವರು ಮನೆಯಿಂದ ವರದಕ್ಷಿಣೆ ತರಲಿಲ್ಲ ಎಂದು ಹೇಳುತ್ತಿದ್ದರು. ನಿಮ್ಮ ಮನೆಗೆ ಹೋಗಿ ಹಣ ತರದೇ ಇದ್ದರೆ ನಿನ್ನ ತವರು ಮನೆಗೆ ಹೋಗು ಇಲ್ಲಿ ಇರುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಿದ್ದರು. ನಾನು ಮತ್ತು 1 ನೇ ಆರೋಪಿ ಹೊರಗೆ ಹೋಗಲು ಬಿಡುತ್ತಿರಲಿಲ್ಲ. ನನ್ನ ಗಂಡ ಒಂದು ವಾರದ ಮಟ್ಟಿಗೆ ಸರಿ ಇದ್ದರು. ನಂತರ ಅವರ ವರ್ತನೆಯಲ್ಲಿ ಬದಲಾವಣೆ ಉಂಟಾಗಿತ್ತು. ರಾತ್ರಿ ಹೋಗಿ ಬೆಳಿಗ್ಗೆ 4 ರಿಂದ 5 ಗಂಟೆಗೆ ಬರುವುದನ್ನು ಮಾಡುತ್ತಿದ್ದರು. ಅದನ್ನು ಕೇಳಲು ಹೋದಾಗ ಅದು ನನ್ನ ಇಷ್ಟ ನನ್ನ ಜೀವನ ನಾನು ಏನು ಬೇಕಾದರೂ ಮಾಡುತ್ತೇನೆ, ನೀನು ಬೇಕಾದರೆ ನಿನ್ನ ತವರು ಮನೆಗೆ ಹೋಗು ಎಂದು ಹೇಳುತ್ತಿದ್ದರು. ನಾನು ನನ್ನ ತಂದೆ ತಾಯಿಯ ಮರ್ಯಾದೆ ದೃಷ್ಟಿಯಿಂದ ಎಲ್ಲವನ್ನೂ ಸಹಿಸಿಕೊಂಡು 1 ನೇ ಆರೋಪಿಯ ಮನೆಯಲ್ಲಿ ಇದ್ದೆ. ರಾತ್ರಿ ತಡವಾಗಿ ಬರುತ್ತಿದ್ದ ಕಾರಣ 1 ನೇ ಆರೋಪಿಯನ್ನು ಕೇಳಲು ಹೋದಾಗ 1 ನೇ ಆರೋಪಿಗೆ ಬೇರೆ ಹುಡುಗಿಯ ಜೊತೆ ಅನೈತಿಕ

ಸಂಬಂಧ ಇದೆ ಎಂದು ತಿಳಿದುಬಂದಿತ್ತು. ದಿಃ 29.3.2022 ರಂದು 1 ಮತ್ತು 2 ನೇ ಆರೋಪಿತರು ಒಟ್ಟಿಗೆ ಸೇರಿ ನನ್ನ ಕೂದಲನ್ನು ಹಿಡಿದು ಈ ವಿಚಾರವನ್ನು ಮಾತನಾಡಬಾರದು, ಮಾತನಾಡಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು 1 ನೇ ಆರೋಪಿ ಕೈಯಿಂದ ನನ್ನ ಬೆನ್ನಿಗೆ ಹಲ್ಲೆ ಮಾಡಿರುತ್ತಾರೆ. ಆ ದಿನ ನನಗೆ ಭಯ ಆಗಿ ಸುಮ್ಮನೆ ಇದ್ದೆ. ಆನಂತರೂ ಸಹ 1 ನೇ ಆರೋೀಪಿಯಎ ವರ್ತನೆಯಲ್ಲಿ ಯಾವುದೇ ಬದಲಾವಣೆಯಾಗದೆ ರಾತ್ರಿ ಹೋಗಿ ಬೆಳಿಗ್ಗೆ ಬರುತ್ತಿದ್ದರು.

ದಿಃ 2.4.2022 ರಂದು ಅದರ ಬಗ್ಗೆ ರಾತ್ರಿ 10 ಗಂಟೆಗೆ ಆಕ್ಷೇಪ ವ್ಯಕ್ತಪಡಿಸಿದಾಗ ಅವರು ಅವಾಚ್ಯವಾಗಿ ರಂಡೆ ನೀನು ನಮ್ಮ ಮನೆಯಲ್ಲಿ ಇರುವ ಅಗತ್ಯ ಇರುವುದಿಲ್ಲ, ನೀನು ನಿನ್ನ ತಾಳಿ ಕಿತ್ತು ಎಸೆದು ನಿನ್ನ ತವರು ಮನೆಗೆ ಹೋಗು ಎಂದು ಹೇಳಿ ನನ್ನ ತಾಳಿಯನ್ನು ಕಿತ್ತು ಎಸೆದು ನನಗೆ ದೈಹಿಕವಾಗಿ ಹಲ್ಲೆ ಮಾಡಿರುತ್ತಾರೆ. ಅದೇ ದಿನ ರಾತ್ರಿ ದಿಃ 3.4.2022 ಕ್ಕೆ ವಿಮಾನ ಟಿಕೇಟನ್ನು ಮುಂಬೈಯಿಂದ ಮಂಗಳೂರಿಗೆ ಹೋಗಲು ಬುಕ್ ಮಾಡಿದ್ದರು. ಅದರ ನಂತರ ದಿಃ 3.4.2022 ರಂದು ನಾನು ನಮ್ಮ ಮನೆಗೆ ಬಂದಿರುತ್ತೇನೆ. ಬರುವುದಾದರೆ ವರದಕ್ಷಿಣೆ ಹಣವನ್ನು ತೆಗೆದುಕೊಂಡು ಬಾ ಎಂದು 1 ನೇ ಆರೋಪಿ ತಿಳಿಸಿದ್ದರು. ತವರು ಮನೆಗೆ ಬಂದು ನಡೆದ ಎಲ್ಲಾ ವಿಚಾರಗಳನ್ನು ನಮ್ಮ ಮನೆಯವರಿಗೆ ಹೇಳಿರುತ್ತೇನೆ. ಆಗ ಸರಿಪಡಿಸಬೇಕೆಂದು ನಮ್ಮ ಮನೆಯವರು 1 ನೇ ಆರೋಪಿಗೆ ದೂರವಾಣಿ ಕರೆ ಮಾಡಿದ್ದರು. ಆಗ 1 ನೇ ಆರೋಪಿ ಸರಿಯಾಗಿ ಪ್ರತಿಕ್ರಿಯೆ ನೀಡಲಿಲ್ಲ. ದಿಃ 20.5.2022 ರಂದು ದೂರವಾಣಿ ಕರೆ ಮಾಡಿ ಮಾತನಾಡಿ ಮುಂಬೈಗೆ ಬನ್ನಿ ಎಂದು 1 ನೇ ಆರೋಪಿ ಹೇಳಿದ್ದರು. ಪುನಃ ವಾಪಾಸು ಕರೆ ಮಾಡಿ ನೀವು ಮಾತ್ರ ಬನ್ನಿ ಮಗಳು ಬರುವುದು ಬೇಡ ಎಂದು ಹೇಳಿದ್ದರು. ಪುನಃ ಕರೆ ಮಾಡಿ ನೀವು ಯಾರು ಸಹ ಬರುವುದು ಬೇಡ ಎಂದು ಹೇಳಿದ್ದರು. ಆನಂತರ ನನ್ನ ಮತ್ತು ನಮ್ಮ ಮನೆಯವರ ನಂಬರನ್ನು ಬ್ಲಾಕ್ ಮಾಡಿರುತ್ತಾರೆ. ಕರ್ಚೂರ್ ನಾಗೇಶ್ವರ್ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರಾದ ಸುರೇಶ್ ಕಡಂದಲೆ ರವರಿಗೆ ದೂರವಾಣಿ ಕರೆ ಮಾಡಿ ವಿಚಾರವನ್ನು ತಿಳಿಸಿದಾಗ ಅವರು ಎಲ್ಲವನ್ನೂ ಸರಿ ಮಾಡುವಾ ಎಂದು ಹೇಳಿದ್ದರು. ದಿಃ 11.6.2022 ರಂದು ನಾವು ಮುಂಬೈಗೆ ಹೋಗಿರುತ್ತೇವೆ. ಅಲ್ಲಿ ಮಾತುಕತೆ ಮಾಡುವಾಗ ಯಾವುದೇ ಕಾರಣಕ್ಕೂ ನಾನು ಬರುವುದು ಬೇಡ ಬರುವುದಾದರೆ 5 ಲಕ್ಷ ಹಣವನ್ನು ತೆಗೆದುಕೊಂಡು ಬನ್ನಿ ಎಂದು ನನ್ನ ಬ್ಯಾಗನ್ನು ಮನೆಯಿಂದ ಹೊರಗೆ ಎಸೆದಿರುತ್ತಾರೆ. ಅಲ್ಲಿಂದ ನಾವು ನಮ್ಮ ಮನೆಗೆ ವಾಪಾಸು ಬಂದು ದಿಃ 8.7.2022 ರಂದು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ದೂರಿನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ1 ಎಂದು ಸಾಕ್ಷಿ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಮದುವೆ ಸಮಯದಲ್ಲಿ ಆರೋಪಿ ನನ್ನ ತಲೆ ಕೂದಲನ್ನು ಹಿಡಿದು ಎಳೆದಾಡಿ ಹಲ್ಲೆ

ಮಾಡಿದ್ದರು. ತುಂಬಾ ಹಿಂಸೆ ನೀಡುತ್ತಿದ್ದರು. ಅಲ್ಲದೆ ಆರೋಪಿ ದೈಹಿಕ ಮತ್ತು ಮಾನಸಿಕವಾಗಿ ಹಿಂಸೆ ನೀಡುತ್ತಿದ್ದರು. ದೂರು ಕೊಟ್ಟ ನಂತರ ನಾನು ದಿಃ 12.7.2022 ರಂದು ಮರುಹೇಳಿಕೆ ನೀಡಿರುತ್ತೇನೆ. ನಾನು ದೂರು ಕೊಡುವಾಗ 1 ಮತ್ತು 2 ನೇ ಆರೋಪಿತರ ಆಧಾರ್ ಕಾರ್ಡಿನಲ್ಲಿರುವ ವಿಳಾಸವನ್ನು ನೀಡಿದ್ದೆ ಆದರೆ ನಾನು ಮದುವೆಯಾಗಿ ಹೋದ ಮನೆ ಮುಂಬೈನ ಮಲಾಯ್ಡ್ ವೆಸ್ಟ್ ಮಾರ್ವೇ ಆಫ್ ರೋಡ್, ಮರಿನಾ ಏನ್ ಕ್ಲೇವ್ ನ ಜಿ ವಿಂಗ್ 604 ವಿಳಾಸದಲ್ಲಿದೆ ಅದೇ ವಿಳಾಸದಲ್ಲಿ ನನಗೆ ಹಿಂಸೆ ನೀಡಿರುತ್ತಾರೆ ಎಂದು ನಾನು ಮರುಹೇಳಿಕೆ ನೀಡಿರುತ್ತೇನೆ. ದೂರು ನೀಡಿದ ನಂತರ ದಿಃ 10.8.2022 ರಂದು ಮಹಜರ್ ಗೆ ಈ ಮೇಲೆ ಹೇಳಿದ ವಿಳಾಸಕ್ಕೆ ಹೋಗಿರುತ್ತೇನೆ. ಆಗ ಸ್ಥಳವನ್ನು ಪೊಲೀಸರಿಗೆ ನಾನೆ ತೋರಿಸಿಕೊಟ್ಟಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ8 ಮತ್ತು 9 ರವರು ಇದ್ದರು. 12.30 ಗಂಟೆಯಿಂದ 1.30 ಗಂಟೆಯವರೆಗೆ ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ. ಮಹಜರ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ2 ಎಂದು ಸಾಕ್ಷಿ ಸಹಿಯನ್ನು ನಿಪಿ2(ಎ) ಎಂದು, ನಕ್ಷೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ3 ಎಂದು ಸಾಕ್ಷಿ ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು. ಮಹಜರ್ ಗೆ ಹೋದಾಗ ಮನೆಗೆ ಬೀಗ ಹಾಕಿದ್ದ ಕಾರಣ ಮನೆಯ ಹೊರಭಾಗದಲ್ಲಿ ಮಹಜರ್ ಮಾಡಿರುತ್ತಾರೆ. ಅಲ್ಲದೆ ಆ ಸಮಯದಲ್ಲಿ ಫೋಟೋಗಳನ್ನು ಸಹ ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ4 ಮತ್ತು 5 ಎಂದು ಗುರುತಿಸಲಾಯಿತು. ಸಿ.ಡಿಯನ್ನು ನಿಪಿ6 ಎಂದು ಗುರುತಿಸಲಾಯಿತು. ನಾನು ದೂರು ನೀಡುವಾಗ ಮದುವೆ ಆಮಂತ್ರಣ ಪತ್ರಿಕೆ ಹಾಗೂ ಮದುವೆ ಸಮಯದಲ್ಲಿ ತೆಗೆದ ಫೋಟೋಗಳನನು ಹಾಜರುಪಡಿಸಿರುತ್ತೇನೆ. ಮದುವೆ ಆಮಂತ್ರಣ ಪತ್ರಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ7 ಮತ್ತು 8 ಎಂದು, ಮದುವೆ ಸಮಯದಲ್ಲಿ ತೆಗೆದ ಫೋಟೋಗಳನ್ನು ಗುರುತಿಸಿದ್ದು, ಅವುಗಳನ್ನು ನಿಪಿ9 ರಿಂದ 12 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ಆರೋಪಿತರು ಖುದ್ದು ವಿನಾಯಿತಿಗೆ ಅರ್ಜಿ ಸಲ್ಲಿಸಿರುವುದರಿಂದ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

( ಈ ಹಂತದಲ್ಲಿ ವಕೀಲರಾದ ಶ್ರೀ. ಡಿ.ಕೆ.ಬಿ ರವರು ದಂಡ ಪ್ರಕ್ರಿಯಾ ಸಂಹಿತೆ ಕಲಂ 309 ರಡಿಯಲ್ಲಿ ಅರ್ಜಿ ಸಲ್ಲಿಸಿ ಪಾಟೀ ಸವಾಲಿಗೆ ಕಾಲಾವಕಾಶ ಬೇಕು ಎಂದು ಕೋರಿದ ಮೇರೆಗೆ ಸಕಾರಣ ಇಲ್ಲದ ಕಾರಣ ಅರ್ಜಿಯನ್ನು ತಿರಸ್ಕರಿಸಲಾಯಿತು ಮತ್ತು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ